**ದಿನಾಂಕ:14-07-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ.ಜಿ.ಪಿ.ಜಿ. ವಕೀಲರಿಂದ ಅರ್ಜಿದಾರರ ಪರವಾಗಿ:-**

ನಾನು ನನ್ನ ಮೌಖಿಕ ಸಾಕ್ಷಿಯನ್ನು ಶಪಥ ಪತ್ರದ ರೂಪದಲ್ಲಿ ಈಗ ನ್ಯಾಯಾಲಯದಲ್ಲಿ ಸಲ್ಲಿಸುತ್ತಿದ್ದೇನೆ. ಸದರಿ ಶಪಥ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ ಆ ಕಾರಣ ಅವುಗಳಲ್ಲಿಯ ಅಂಶಗಳು ನಿಜವಿರುತ್ತದೆ. ಸದರಿ ಅಂಶಗಳನ್ನು ಓದಿಸಿ ತಿಳಿದುಕೊಂಡ ಮೇಲೆ ಒಪ್ಪಿ ನನ್ನ ಸಹಿ ಮಾಡಿರುತ್ತೇನೆ. ನಾನು ದಾವೆಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ನನ್ನ ಪರವಾನಿಗೆ ನಿಶಾನೆಗೊಳಿಸಲು ವಿನಂತಿಸಿಕೊಳ್ಳುತ್ತೇನೆ.

1) ಎದುರುದಾರರು ನೀಡಿದ ಅಲಭ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.1 ಎಂದು ಗುರುತಿಸಲಾಯಿತು.
2) ವಂಶಾವಳಿ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಅದನ್ನು ನಿಪಿ.2 ಎಂದು ಗುರುತಿಸಲಾಯಿತು.
3) ಅರ್ಜಿದಾರ ನಂ.1 ರಿಂದ 3 ರವರ ಆಧಾರ ಕಾರ್ಡಿನ ದೃಡಿಕೃತ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-3 ರಿಂದ 5 ಎಂದು ಗುರುತಿಸಲಾಯಿತು.
4) ಇಂಗ್ಲೀಷ ದಿನಪತ್ರಿಕೆಯಾದ ಪಬ್ಲಿಕ ಕಾನಫೆರೇನ್ಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ.6 ಎಂದು ಅದರ ನೋಟಿಸಿನ ಭಾಗವನ್ನು ನಿಪಿ.6(ಎ) ಗುರುತಿಸಲಾಯಿತು.
5) ಕನ್ನಡ ದಿನಪತ್ರಿಕೆಯಾದ ಬಹುಮನಿ ಕೋಟೆ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.7 ಎಂದು ಅದರ ನೋಟಿಸಿನ ಭಾಗವನ್ನು ನಿಪಿ.7(ಎ) ಗುರುತಿಸಲಾಯಿತು.

(ನಿಪಿ.2 ರಿಂದ 5 ರ ಮೂಲ ಪ್ರತಿಯನ್ನು ಪರಿಶೀಲಿಸಿ ಮರಳಿ ಅರ್ಜಿದಾರರಿಗೆ ಹಿಂದುರುಗಿಸಲಾಯಿತು.)

**(ಈ ಹಂತದಲ್ಲಿ ಎದುರುದಾರ ಏಕತರ್ಪೀ ಇದ್ದ ಕಾರಣ, ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**(ಓ.ಹೇ.ಕೇ.ಸ.ಇದೆ)**

**ದಿವಾಣಿ ನ್ಯಾಯಾಧೀಶರು**
**ಬಸವಕಲ್ಯಾಣ.**

**ಸಾಕ್ಷಿದಾರರ ಸಹಿ:-**